**-11-**

**ದಿನಾಂಕಃ 15-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ

ಬಿಲಗದ್ದೆ ಗ್ರಾಮದ ಸ ನಂ. 222 ರಲ್ಲಿ ಪ್ರತಿವಾದಿ ಶ್ರೀಮತಿ ಜಯಮ್ಮ, ಶ್ರೀಮತಿ ಶಾಂತಮ್ಮ ಬಿನ್ ಮರಿಯಪ್ಪ ಗೌಡ, ಶ್ರೀಮತಿ ಗೌರಮ್ಮ ಬಿನ್ ಗೋಪಾಲ ಗೌಡ, ಸತೀಶ, ಮಂಜುನಾಥ ಬಿನ್ ದುರ್ಗಪ್ಪ ಗೌಡ ರವರ ಹೆಸರಿನಲ್ಲಿ ಪಹಣಿಗಳು ಇವೆ. ಸದರಿ ಸ ನಂ. 222 ರಲ್ಲಿ ಶ್ರೀಮತಿ ಶಾಂತಮ್ಮ ಬಿನ್ ಮರಿಯಪ್ಪ ಗೌಡ ರವರಿಗೆ 1 ಎಕರೆ, ಮಂಜುನಾಥ ರವರಿಗೆ 12.8 ಗುಂಟೆ, ನನಗೆ 12 ಗುಂಟೆ ಜಮೀನು ಇದೆ. ಉಳಿಕೆ ಜಮೀನನ್ನು ಉಳಿದವರು ಯಾವ ರೀತಿ ಭಾಗ ಮಾಡಿಕೊಂಡಿದ್ದಾರೆ ಗೊತ್ತಿಲ್ಲ.

ಪ್ರಶ್ನೆ- ಸ ನಂ. 137 ಸರ್ಕಾರಿ ಜಾಗದಲ್ಲಿ ಎಷ್ಟು ಅಡಿ ರಸ್ತೆ ಇದೆ?

ಉ- 12 ಅಡಿ ಅಗಲ, 200 ಮೀಟರ್ ಉದ್ದದ ರಸ್ತೆ ಇದೆ.

ಪ್ರಶ್ನೆ- ಸರ್ಕಾರಿ ಸ ನಂ. ನಂ. 223 ರಲ್ಲಿ ಎಷ್ಟು ಅಡಿ ಅಗಲ ಹಾಗೂ ಎಷ್ಟು ಅಡಿ ಉದ್ದದ ರಸ್ತೆ ಇದೆ?

ಉ- ಸ ನಂ. 223 ರಲ್ಲಿ 200 ಮೀಟರ್ ಉದ್ದ, ಸ ನಂ. 222 ರವರೆಗೆ ರಸ್ತೆ ಇದೆ.

ಪ್ರಶ್ನೆ- ಸ ನಂ. 222 ನಿಮ್ಮ ಜಮೀನಿನ ಸುತ್ತ ಮುತ್ತ ಯಾರ ಯಾರ ಜಮೀನುಗಳು ಬರುತ್ತದೆ ?

ಉ- ಪೂರ್ವಕ್ಕೆ- ನನ್ನ ಜಮೀನು ಸ ನಂ. 157/1 2 ಎಕರೆ , ಪಶ್ಚಿಮಕ್ಕೆ - ಮಂಜುನಾಥ ಬಿನ್ ದುರ್ಗಪ್ಪ ಗೌಡ, ಉತ್ತರಕ್ಕೆ - ಶಾಂತಮ್ಮ ಬಿನ್ ಮರಿಯಪ್ಪ ಗೌಡ, ದಕ್ಷಿಣಕ್ಕೆ - ಸರ್ಕಾರಿ ಜಾಗ ಬರುತ್ತದೆ.

ಪ್ರಶ್ನೆ- ನಿಮ್ಮ ಜಮೀನಿನ ಯಾವ ದಿಕ್ಕಿಗೆ ಪ್ರತಿವಾದಿಗಳ ಜಮೀನು ಬರುತ್ತದೆ ?

ಉ- ನಮ್ಮ ಜಮೀನಿನ ಯಾವುದೇ ದಿಕ್ಕಿನಲ್ಲಿ ಪ್ರತಿವಾದಿಯ ಜಮೀನು ಇಲ್ಲ.

ಪ್ರಶ್ನೆ - ದಾವಾ ಸರ್ವೆ ನಂಬರ್ ಗೆ ನಕಾಶೆ ಕಂಡ ರಸ್ತೆ ಇದೆಯೋ ಇಲ್ಲವೋ ?

ಉ - ನಮ್ಮ ಜಮೀನಿನ ಸುತ್ತ ಮುತ್ತ ನಕಾಶೆ ಕಂಡ ರಸ್ತೆ ಇಲ್ಲ.

ದಾವಾ ಸರ್ವೆ ನಂಬರ್ ಗೆ ನಕಾಶೆ ಕಂಡ ರಸ್ತೆ ಇಲ್ಲ. ದಾವಾ ಸರ್ವೆ ನಂಬರ್ ನಕಾಶೆ ಕಂಡಂತೆ ರಸ್ತೆ ಇದೆಯೋ ಇಲ್ಲವೋ ತಿಳಿದುಕೊಳ್ಳಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ತಿಳಿದುಕೊಳ್ಳಲು ನನ್ನ ಒಪ್ಪಿಗೆ ಇಲ್ಲ. ಸಾಕ್ಷಿ ಸ್ವತಃ ಹಿಂದಿನ ದಾವೆಯಲ್ಲೂ ಕೂಡ ಕೋರ್ಟ್ ಕಮಿಷನರ್ ಅನ್ನು ನೇಮಕ ಮಾಡಿ ಸ್ಕೆಚ್ ತಯಾರಿಸಿ , ರಾಜೀ ಒಪ್ಪಂದಕ್ಕೆ ಹಾಜರು ಪಡಿಸಿದ್ದರು.

ಅದರಲ್ಲಿ ಸರ್ವೆ ನಂಬರ್ ನಮೂದಿಸಿಲ್ಲ , ಆದರೆ ಸ ನಂ. 222 ರ ಜಮೀನಿಗೆ ದಾರಿ ಎಂದು ಬರೆದ್ದಾರೆ ಎಂದು ನುಡಿದಿರುತ್ತಾರೆ. ಬರವಣೆಗೆಯಲ್ಲಿ ಯಾವ ಸರ್ವೆ ನಂಬರ್ ಎಂದು ನಮೂದಿಸಿಲ್ಲ. ನಕಾಶೆ ಕಂಡ ರಸ್ತೆ ಯಾವ ಸರ್ವೆ ನಂಬರ್ ನಿಂದ ಹಾಯ್ದು ಹೋಗಿದೆ ಎಂಬುದನ್ನು ಪರಿಶೀಲನೆ ಮಾಡಲು ತಂತ್ರ ಜ್ಞ ನಿಯೋಗಿಯನ್ನು ನೇಮಕ ಮಾಡಲು ನಿಮ್ಮ ತಕರಾರು ಇದೆಯೇ ಎಂದರೆ ಸಾಕ್ಷಿ ನನ್ನ ಒಪ್ಪಿಗೆ ಇಲ್ಲ ಆ ರಸ್ತೆ ಎಲ್ಲೆಲ್ಲೋ ಸಂಪರ್ಕ ತೋರಿಸಿರುತ್ತಾರೆ , ನನ್ನ ಜಮೀನಿಗೆ ಸಂಪರ್ಕ ತೋರಿಸಿರುವುದಿಲ್ಲ ಎಂದು ಕಾರಣ ನನ್ನ ಅಭ್ಯಂತರ ಇದೆ. ಸೋದರ ಸಂಬಂಧಿ ಮಂಜುನಾಥ ರವರ ಸಾಕ್ಷಿ ವಿಚಾರ ಮಾಡಲು ಆಗುವುದಿಲ್ಲ. ಸಾಕ್ಷಿ ಸ್ವತಃ ಅವರಿಗೆ ದಾರಿ ಬಿಟ್ಟಿದ್ದಾರೆ ನಮಗೆ ದಾರಿ ಬಿಟ್ಟಿಲ್ಲ ಹಾಗೂ ಮಂಜುನಾಥ್ ರವರು ಪ್ರತಿವಾದಿಗಳ ಪರವಾಗಿ ಇದ್ದಾರೆ. ದಾವಾ ಸ್ವತ್ತಿನ ಆಸುಪಾಸಿನ ಯಾವುದೇ ಖಾಸಗಿ ವ್ಯಕ್ತಿಗಳನ್ನು ವಿಚಾರಣೆ ಮಾಡಬೇಕಾದರೆ ಯಾರ ವಿಚಾರಣೆ ಮಾಡುತ್ತೀರಿ ಎಂದರೆ ಸಾಕ್ಷಿ ಗ್ರಾಮ ಪಂಚಾಯಿತಿ ಸದಸ್ಯರಾದ ನವೀನ್ ಮತ್ತು ರಕ್ಷಿತ್ ರವರು ಯಾರನ್ನು ಸಾಕ್ಷಿ ವಿಚಾರಣೆಗೆ ಬರಲು ಬಿಡುತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸರ್ವೆ ನಂಬರ್ ಇರುವ ಗ್ರಾಮದ ವ್ಯಕ್ತಿಗಳನ್ನು ಸಾಕ್ಷಿಯ ವಿಚಾರಣೆ ಮಾಡಿಸಲು ಆಗುತ್ತಿಲ್ಲ, ಕಾರಣ ಅವರು ಬಿಡುತ್ತಿಲ್ಲ. ಸಾಕ್ಷಿ ಮುಂದುವರೆದು ರಾಜೀ ಪಂಚಾಯಿತಿಗೆ ಬಿಟ್ಟಿಲ್ಲ, ಸ ನಂ. 222 ನನಗೆ ಸಂಬಂಧ ಪಟ್ಟ ಜಮೀನು ನೀವು ಒಂದು ತೀರ್ಮಾನಕ್ಕೆ ಬನ್ನಿ ಎಂದು ತಿಳಿಸಿದರು ಬರದೇ ಪ್ರತೀ ವರ್ಷ ಅಡಿಕೆ, ಕಾಫಿ ಯಾವುದಕ್ಕೂ ಔಷಧಿ ಸಿಂಪಡಿ ಮಾಡಲು ಬಿಡದೇ ನಮ್ಮ ಮೇಲೆ ಹಲ್ಲೆ ಮಾಡಿ, ನಮ್ಮ ಮೇಲೆ ಎಫ್ ಐ ಆರ್ ದಾಖಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದರಿಂದ ಪ್ರತೀ ವರ್ಷ ನನಗೆ 5-6 ಲಕ್ಷ ನಷ್ಟ ಉಂಟಾಗುತ್ತಿದೆ.

ಸಾಕ್ಷಿ ವಕೀಲರಿಗೆ ನಿವೇ ಸ್ವತಃ 50-60 ಜನ ಗ್ರಾಮಸ್ಥರನ್ನು ಕರೆದುಕೊಂಡು ಬಂದು ಸ್ಟ್ರೈಕ್ ಮಾಡಿಸಿರುತ್ತೀರಿ ಎಂದು ಹೇಳಿರುತ್ತೀರಿ.

ಹಳೆಯ ದಾವೆಯಲ್ಲಿರುವ ಸ ನಂ. 199/1988 ರ ದಾವೆಯಲ್ಲಿರುವ ಪ್ರತಿವಾದಿ ಬಿ ಹಾಲಪ್ಪ ಗೌಡ ನನ್ನ ಸೋದರ ಮಾವ ಆಗಬೇಕು. ಹಾಲಪ್ಪ ಗೌಡ ಸಾಕ್ಷಿಯ ವಿಚಾರಣೆ ಮಾಡಿಸಲು ಆಗುವುದಿಲ್ಲ. ಅವರಿಗೆ ವಯಸ್ಸಾಗಿದೆ, ಆರೋಗ್ಯ ಸರಿ ಇಲ್ಲ. ಆ ದಾವೆಯಲ್ಲಿರುವ ಸುರೇಶರವರನ್ನು ನನ್ನ ಪರವಾಗಿ ಸಾಕ್ಷಿ-

ಮಾಡಿಸಲು ಆಗುವುದಿಲ್ಲ, ಅವರು ಸಾಕ್ಷಿಯ ವಿಚಾರಣೆಗೆ ಬಂದಿದ್ದಾಗ ಅವರನ್ನು ಹೊಡೆದು ಸಹಿ ಮಾಡಲು ಬಿಟ್ಟಿಲ್ಲ , ಕಾರಣ ಅವರ ಸಾಕ್ಷಿಯ ವಿಚಾರಣೆ ಮಾಡಿಸಲು ಆಗುವುದಿಲ್ಲ. ಬಿಲಗದ್ದೆ ಪಕ್ಕದಲ್ಲಿ ಬೇಗಾನೆ ಮತ್ತು ಶಾನವಳ್ಳಿ ಗ್ರಾಮ ಇದೆ. ಸದರಿ ಗ್ರಾಮಗಳಿಂದ ಯಾವುದೇ ಖಾಸಗಿ ವ್ಯಕ್ತಿಗಳನ್ನು ಕರೆದುಕೊಂಡು ಬಂದು ಸಾಕ್ಷಿಯ ವಿಚಾರಣೆ ಮಾಡಿಸಲು ಆಗುವುದಿಲ್ಲ. ಬಿಲಗದ್ದೆ, ಬೇಗಾನೆ ಮತ್ತು ಶಾನವಳ್ಳಿ ಗ್ರಾಮದಿಂದ ಯಾರನ್ನೂ ಸಾಕ್ಷಿಯ ವಿಚಾರಣೆಗೆ ಕರೆಸಲು ಆಗುವುದಿಲ್ಲ. ನನ್ನ ಸೋದರ ಮಾವ ಹಾಲಪ್ಪಗೌಡ ಈಗಲೂ ಆರೋಗ್ಯವಾಗಿದ್ದು, ಎಲ್ಲಾ ವ್ಯಾವಹಾರಿಕ ಜ್ಞಾನವನ್ನು ಹೊಂದಿರುವ ವ್ಯಕ್ತಿಯಾಗಿದ್ದಾರೆ ಎಂದರೆ ಸಾಕ್ಷಿ ಅದು ನಿಮಗೇ ಗೊತ್ತಿರಬೇಕು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ದಿಃ 06-01-2021 ರಿಂದ ಇಲ್ಲಿಯವರೆಗೂ ನನಗೆ ಪ್ರತೀ ವರ್ಷ 5-6 ಲಕ್ಷ ರೂ. ನಷ್ಟ ಉಂಟಾಗಿದೆ. ಸ.ನಂ. 222 ರಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ, ಅದು ಮಂಜುನಾಥ್ ರವರ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿ 12.8 ನನ್ನ ಸ್ವಾಧೀನದಲ್ಲಿದೆ ಎಂದು ನುಡಿದಿರುತ್ತಾರೆ. ನನ್ನ ದಾವೆಯಲ್ಲಿ ಕೇಳಿದ ಪರಿಹಾರ ಸಂಬಂಧ ಸ ನಂ. 223 ಮತ್ತು ಸರ್ವೆ ನಂ. 137 ಸರ್ಕಾರಿ ಸರ್ವೆ ನಂಬರ್ ನಲ್ಲಿ ಕೋರಿರುವಂತ ದಾರಿ ಮತ್ತು ಪರಿಹಾರಕ್ಕೆ ಸಂಬಂಧ ಪಟ್ಟಂತೆ ದಾವೆಯ ಷೆಡ್ಯೂಲ್ ನಲ್ಲಿ ನಮೂದಿಸಿದ್ದೇವೆ. ಕೈ ತಪ್ಪಿನಿಂದ ಬಿಟ್ಟು ಹೋಗಿದ್ದರೂ ಹೋಗಿರಬಹುದು. ಒಂದು ವೇಳೆ ಷೆಡ್ಯೂಲ್ ನಲ್ಲಿ ಹೇಳದೇ ಹೋಗಿದ್ದರೇ ನಮಗೆ ಪರಿಹಾರ ಪಡೆಯಲು ಅವಕಾಶ ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿರುವ ಆಸ್ತಿಗೂ ನಾನು ಕೋರಿರುವ ಪರಿಹಾರಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಿವಾದಕ್ಕೆ ಸಂಬಂಧ ಪಟ್ಟದ್ದು ಬಿಲಗದ್ದೆ ಗ್ರಾಮದ ಸರ್ಕಾರಿ ಸರ್ವೆ ನಂಬರ್ 137 ಮತ್ತು ಸ ನಂ. 223 ಎಂದರೆ ಸರಿ. ವಿವಾದಕ್ಕೆ ಒಳಪಟ್ಟಂತಹ ಸರ್ವೆ ನಂಬರ್ ಗಳನ್ನು ದಾವೆಯ ಷೆಡ್ಯೂಲ್ ನಲ್ಲಿ ನಮೂದಿಸಲು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ಸರ್ಕಾರಿ ಸರ್ವೆ ನಂಬರ್ ಗಳ ಮೇಲೆ ಅಧಿಕಾರ ಹೊಂದಲು ನನಗೆ ಯಾವುದೇ ಹಕ್ಕು ಪ್ರಾಪ್ತಿಯಾಗಿಲ್ಲ ಎಂದರೆ ಸಾಕ್ಷಿ ಅನಾದಿಕಾಲದಿಂದಲೂ ಹಕ್ಕು ಇದೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳು ಸರ್ಕಾರಿ ಸರ್ವೆ ನಂಬರ್ 137 ಮತ್ತು ಸ ನಂ. 223 ರಲ್ಲಿರುವ ರಸ್ತೆಗೆ ಯಾವತ್ತೂ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಸರ್ವೆ ನಂಬರ್ ಶಾನವಳ್ಳಿ ಕಾವಡಿ ರಸ್ತೆ ಇಂದ ಸರ್ಕಾರಿ ಸ ನಂ. 137 ಮತ್ತು ಸ ನಂ. 223 ರ ರಸ್ತೆ ಒಟ್ಟು 130 ಮೀಟರ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ 200 ಮೀಟರ್ ಇದೆ ಸ ನಂ. 222 ರವರೆಗೆ ಇದೆ ಎಂದು ನುಡಿದಿರುತ್ತಾರೆ.

ಸದರಿ ಸರ್ಕಾರಿ ಸ .ನಂ. 137 ಮತ್ತು 223 ರಲ್ಲಿರುವ 130 ಮೀಟರ್ ರಸ್ತೆ ಪ್ರತಿವಾದಿಗಳ ಮನೆಗೆ ಕೊನೆಗೊಳ್ಳುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಜಮೀನಿಗೆ ಕೊನೆಗೊಳ್ಳುತ್ತದೆ ಎಂದು ನುಡಿದಿರುತ್ತಾರೆ. ಸದರಿ ರಸ್ತೆ ಸರ್ಕಾರಿ ಸರ್ವೆ ನಂಬರ್ ಗಳಲಿಲ ಅಸ್ತಿತ್ವದಲ್ಲಿರುವುದೇ 130 ಮೀಟರ್ ಎಂದರೆ ಸರಿಯಲ್ಲ. ಸರ್ಕಾರಿ ಜಾಗದಲ್ಲಿ ಎಷ್ಟು ಉದ್ದ ಹಾಗೂ ಎಲ್ಲಿಯವರೆಗೂ ಹಾದ್ಧು ಹೋಗಿದೆ ಎಂದು ಪರಿಶೀಲಿಸಲು ತಂತಜ್ಞ ನಿಯೋಗಿಯನ್ನು ನೇಮಕ ಮಾಡಲು ನನ್ನ ತಕರಾರು ಇದೆ. ಸಾಕ್ಷಿ ಈಗಾಗಲೇ 4 ಬಾರಿ ಅಳತೆ ಆಗಿದೆ ಎಂದು ನುಡಿದಿರುತ್ತಾರೆ. ನಿಯೋಗಿಯನ್ನು ನೇಮಕ ಮಾಡುವಂತೆ ಕೋರಿ ಪ್ರತಿವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ ಇನ್ನೂ ಬಾಕಿ ಇದೆ, ಎಂದರೆ ಸಾಕ್ಷಿ ಈಗಾಗಲೇ ಕೋರ್ಟ್ ಕಮಿಷನರ್ ನಮ್ಮ ಜಮೀನನ್ನು ಅಳತೆ ಮಾಡಿರುವುದರಿಂದ ಹಾಗೂ ಅನಾದಿಕಾಲದಿಂದಲೂ ರಸ್ತೆ ಇರುವುದರಿಂದ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಲು ನನ್ನ ತಕರಾರು ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ. ನ್ಯಾಯಾಲಯದಿಂದ ನಿಯೋಗಿ ನೇಮಕವಾದರೆ ಸತ್ಯ ಸಂಗತಿ ಗೊತ್ತಾಗುತ್ತದೆ, ಕಾರಣ ನಾನು ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನಲ್ಲಿ ದುರುದ್ದೇಶದಿಂದ ಹಾಗೂ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು ಪರಿಹಾರ ಪಡೆಯುವ ಉದ್ದೇಶದಿಂದ ಷೆಡ್ಯೂಲ್ ನಲ್ಲಿ ವಿವಾದಕ್ಕೆ ಒಳಪಟ್ಟ ಸ ನಂ. 137 ಹಾಗೂ ಸ ನಂ. 223 ತೋರಿಸಿಲ್ಲ, ಎಂದರೆ ಸಾಕ್ಷಿ ಸತ್ಯಕ್ಕೆ ದೂರವಾದುದು ಎಂದು ನುಡಿದಿರುತ್ತಾರೆ. ದಾವಾ ಸ.ನಂ. 222 , 257 ಈ ವರೆಗೂ ಪೋಡಿ ಆಗಿಲ್ಲ ಎಂದರೆ ಸರಿ. ಸಾಕ್ಷಿ ಪೋಡಿಗೆ ಅವರು ಒಪ್ಪಿಗೆ ಕೊಟ್ಟಿಲ್ಲ ಪ್ರತೀ ಬಾರಿ ಅವರು ತಕರಾರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಪೋಡಿ ಮಾಡದೇ ದಾವಾ ಸರ್ವೆ ನಂಬರ್ ಅನ್ನು ನಿಗದಿತವಾಗಿ ಗುರುತಿಸಲು ಆಗುತ್ತಿಲ್ಲ ಎಂದರೆ ಸತ್ಯಕ್ಕೆ ದೂರವಾದುದು, ಸಾಕ್ಷಿ ಜಯಮ್ಮ ಮತ್ತು ಗೌರಮ್ಮ ವಿಭಾಗ ಮಾಡಿಕೊಂಡು ಪೋಡಿ ಮಾಡಲು ಬಂದಾಗ ತಕರಾರು ಮಾಡಿ ತಡೆದಿರುತ್ತಾರೆ ನಾನು ಒಪ್ಪಿಗೆ ಕೊಟ್ಟಿದ್ದೆ ಎಂದು ನುಡಿದಿರುತ್ತಾರೆ.

ದಾವೆಯಲ್ಲಿರುವ ವಿವಾದ ಸರ್ಕಾರಿ ಸರ್ವೆ ನಂ.137 ಮತ್ತು 223 ಕ್ಕೆ ಸಂಬಂಧ ಪಟ್ಟಾದಾಗಿದೆ ಎಂದರೆ ಸರಿ. ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟು ಅಕ್ರಮ ಪರಿಹಾರ ಪಡೆಯುವ ಉದ್ದೇಶದಿಂದ ಷೆಡ್ಯೂಲ್ ನಲ್ಲಿ ವಿವಾದಿತ ಸರ್ವೆ ನಂಬರ್ ಗಳನ್ನು ತೋರಿಸಿಲ್ಲ ಎಂದರೆ ಸತ್ಯಕ್ಕೆ ದೂರವಾದುದು. ದಾವೆಯ ಜೊತೆಗೆ ಪ್ರತಿವಾದಿಗಳ ಸ್ವಾಧೀನದಲ್ಲಿರುವ ಜಮೀನಿಗೆ ಹಕ್ಕು -

ಪ್ರತಿಪಾದನೆ ಮಾಡಲು ನಿಮಗೆ ಅಧಿಕಾರವಿದೆಯೇ ಎಂದರೆ ಸಾಕ್ಷಿ ಸರ್ವೆ ನಂ. 222 ನನ್ನ ಜಮೀನನ್ನು ಅತಿಕ್ರಮಣ ಮಾಡಲು ಮುಂದಾಗಿದ್ದರಿಂದ ನನ್ನ ಅಧಿಕಾರವಿದೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳ ಜಮೀನಿನ ಮೇಲೆ ಹಕ್ಕು ಪ್ರತಿಪಾದನೆ ಮಾಡಲು ನಾನು ಯಾವುದೇ ಪರಿಹಾರವನ್ನು ಕೋರಿಲ್ಲ ಎಂದರೆ ಸಾಕ್ಷಿ 223 ಸರ್ಕಾರಿ ಸರ್ವೆ ನಂಬರ್ ನಲ್ಲಿ ಓಡಾಡಲು ಬಿಟ್ಟಿಲ್ಲ ನಂತರ ನ್ಯಾಯಾಲಯ ಆದೇಶ ಮಾಡಿದ ನಂತರ 200 ಮೀಟರ್ ಗೆ ನಮ್ಮದು ತಕರಾರು ಇಲ್ಲ ಎಂದು ನ್ಯಾಯಾಲಯಕ್ಕೆ ಒಪ್ಪಿಗೆ ಕೊಟ್ಟು ನನ್ನ ಖಾತೆ ಜಮೀನು 222 12.8 ಗುಂಟೆ ಜಮೀನಿಗೆ ಪ್ರವೇಶ ಮಾಡಲು ಮುಂದಾಗಿರುತ್ತಾರೆ. ಪ್ರತಿವಾದಿಗಳಿಗೆ ಸಂಬಂಧ ಪಟ್ಟ 222 ರ ಜಮೀನಿಗೆ ಸಂಬಂಧ ಪಟ್ಟಂತೆ ಹಕ್ಕು ಪ್ರತಿಪಾದನೆ ಮಾಡಿಲ್ಲ. ನನ್ನ 12.8 ಗುಂಟೆ ಜಮೀನು ಬಿಟ್ಟು ಯಾವುದೇ ಹಕ್ಕನ್ನು ಮಾಡಲು ಹೋಗಿಲ್ಲ. ನನಗೆ ಪ್ರತಿವಾದಿಗಳ ಸರ್ವೆ ನಂ. 222 ರಲ್ಲಿ ಹೊಸದಾಗಿ ರಸ್ತೆ ಮಾಡಲು ಯಾವುದೇ ಅವಕಾಶ ಇಲ್ಲ. ಎಂದರೆ ಸಾಕ್ಷಿ 222 ನನ್ನದೇ ಜಮೀನು ಆಗಿರುವುದರಿಂದ ಅವರಿಗೆ ತಡೆಯಲು ಅಧಿಕಾರ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ. 222 ರಲ್ಲಿ ರಸ್ತೆ ಇದೆಯೋ ಇಲ್ಲವೋ ಪರಿಶೀಲನೆ ಮಾಡಲು ಯಾವುದಾದರೂ ಪರಿಣಿತ ತಂತ್ರಜ್ಞ ನಿಯೋಜನೆ ಮಾಡಲು ನನ್ನ ತಕರಾರು ಇದೆ. ನಾನು ಸುಳ್ಳು ಸಂಗತಿಗಳನ್ನು ನಿರೂಪಿಸಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದುರುದ್ದೇಶದಿಂದ ವಿವಾದಿತ ಸರ್ವೆ ನಂಬರ್ ಗಳನ್ನು ಷೆಡ್ಯೂಲ್ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ ನಂ. 137 ಮತ್ತು ಸ ನಂ. 223 ರಲ್ಲಿರುವ ರಸ್ತೆ ಪ್ರತಿವಾದಿಗಳ ಮನೆಗೆ ಹೋಗಿ ತಲುಪುತ್ತದೆ ಎಂದರೆ ಸುಳ್ಳಿನಿಂದ ಕೂಡಿರುತ್ತದೆ. ಸಾಕ್ಷಿಗೆ ಪ್ರತಿವಾದಿಗಳು ತಯಾರು ಮಾಡಿದ ಸ್ಕೆಚ್ ಅನ್ನು ತೋರಿಸಲಾಗಿ ಅದು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳ ಮನೆಯಿಂದ 20 ಮೀಟರ್ ದೂರದಲ್ಲಿ ನಮ್ಮ ದಾಯಾದಿಗಳಾದ ಮಂಜುನಾಥರವರ ಮನೆ ಇದೆ ಎಂದರೆ ಸುಳ್ಳು. ನನ್ನ ಸುಳ್ಳು ನಿರೂಪಣೆಯ ಕಾರಣಕ್ಕೆ ನಾನು ನಮ್ಮ ಗ್ರಾಮವಾಗಲೀ ಅಥವಾ ಅಕ್ಕ ಪಕ್ಕದ ಗ್ರಾಮದನ್ನವರಾಗಲೀ ಸಾಕ್ಷಿಯ ವಿಚಾರಣೆ ಮಾಡಿಸಲು ಆಗುತ್ತಿಲ್ಲ ಎಂದರೆ ಸಾಕ್ಷಿ ನಮ್ಮ ಪರವಾಗಿ ಸಾಕ್ಷಿ ಹೇಳಲು ಬಂದವರನ್ನು ಗ್ರಾಮ ಸಭೆಯಲ್ಲಿ ಸಾಕ್ಷಿಗಳನ್ನು ಬೆದರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಸೋದರ ಮಾವ ಸತ್ಯ ಹೇಳಬಹುದು ಎಂದು ಅವರನ್ನೂ ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ವಿಚಾರಣೆ ಮಾಡಿಸಲು ಮುಂದಾಗುತ್ತಿಲ್ಲ ಎಂದರೆ ಸಾಕ್ಷಿ ಅವರೇ ನನಗೆ ಆರೋಗ್ಯ ಸರಿ ಇಲ್ಲ ಎಂದು ಹೇಳಿದ್ದಾರೆ ಎಂದು ನುಡಿದಿರುತ್ತಾರೆ.

ನನ್ನ ಸಹೋದರ ಸುರೇಶನನ್ನು ಸಾಕ್ಷಿಯ ವಿಚಾರಣೆ ಮಾಡಿಸಲು ಆಗುವುದಿಲ್ಲ , ಅವರು ಸಾಕ್ಷಿಯ ವಿಚಾರಣೆ ಹೇಳಲು ಬಂದಾಗ ಘಟನಾ ಸ್ಥಳದಲ್ಲಿ ಹೊಡೆದು ಕಳುಹಿಸಿದ್ದಾರೆ. ನ್ಯಾಯಾಲಯಕ್ಕೆ ಬರುವಾಗ ಮತ್ತು ಹೋದ ನಂತರ ಬೆದರಿಕೆ ಹಾಕುತ್ತಾರೆ ಕಾರಣ ಅವರು ಸಾಕ್ಷಿಯ ವಿಚಾರಣೆಗೆ ಬರುವುದಿಲ್ಲ. ನಾನು ಕೋರಿದ ಪರಿಹಾರ ಪಡೆಯಲು ಯಾವುದೇ ಅವಕಾಶ ಇಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಿ ಇದು ವಿವಾದಕ್ಕೆ ಸಂಬಂಧ ಪಟ್ಟ ದಾಖಲಾತಿ ಹೌದೋ ಅಲ್ಲವೋ ಎಂದು ಕೇಳಲಾಗಿ ಸಾಕ್ಷಿ ಅದು ಸುಳ್ಳಿನಿಂದ ಕೂಡಿದೆ ಎಂದು ನುಡಿದಿರುತ್ತಾರೆ. ದಾವಾ ವಿವಾದಿತ ಸ ನಂ.137, 227 ಕ್ಕೆ ಸಂಬಂಧ ಪಟ್ಟಂತ ದಾಖಲಾತಿ ತೋರಿಸಲಾಗಿ ಇದು ಸುಳ್ಳಿನಿಂದ ಕೂಡಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಸರ್ವೆ ನಂಬರ್ ಗೆ ಸಂಬಂಧ ಪಟ್ಟ ದಸ್ತಾವೇಜು ಎಂದರೆ ಸಾಕ್ಷಿ ತಪ್ಪಾಗಿದೆ ಎಂದು ನುಡಿದಿರುತ್ತಾರೆ. ನನಗೆ ಕನ್ನಡ ಓದಲು ಬರುತ್ತದೆ. ಈ ದಸ್ತಾವೇಜನ್ನು ಓದಬಹುದು ಎಂದರೆ ಸುಳ್ಳಿನಿಂದ ಕೂಡಿದೆ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ